## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 269 |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 11.12.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪೌತಿ ಖಾತೆ ಅಂದೋಲನವನ್ನು ಎಂದಿನಿಂದ ಪ್ರಾರಂಭಿಸಲಾಗುವುದು; ಜಮೀನಿನ ವ್ಯಾಜ್ಯಗಳಿದ್ದರೆ ರೈತರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಪೌತಿ ಖಾತೆ ಅಂದೋಲನದ ರೀತಿಯಲ್ಲಿ ಬಗೆ ಹರಿಸಲು ಸಂಬಂಧಪಟ್ಟ ತಹಶೀಲ್ದಾರ್, ಎ.ಸಿ.ಗಳಿಗೆ ಸರ್ಕಾರ ನಿರ್ದೇಶನ ನೀಡಲಾಗುವುದೇ: (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019(ಇ) ದಿನಾಂಕ: 17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019(ಇ) ದಿನಾಂಕ: 10.01.2024ರನ್ವಯ ಪೌತಿ/ವಾರಸಾ ಖಾತೆ ಆಂದೋಲನವನ್ನು ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಅದರಂತೆ ಪೌತಿ ಖಾತೆ ಆಂದೋಲನವನ್ನು ಹಮ್ಮಿಕೊಂಡು ಪೌತಿ ಖಾತೆ ಬದಲಾವಣೆಗೆ ಅಗತ್ಯ ಕ್ರಮ ವಹಿಸಲು ಎಲ್ಲಾ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್ ರವರಿಗೆ ಸೂಚಿಸಲಾಗಿರುತ್ತದೆ.<br>ಈ ಪ್ರಕ್ರಿಯೆಯು ಕಂದಾಯ ಇಲಾಖೆಯ ನಿರಂತರ ಕ್ರಿಯಾಯೋಜನೆಯಾಗಿದ್ದು, ಈ ಯೋಜನೆ ಅನುಷ್ಠಾನ ಮತ್ತು ಪ್ರಗತಿಯನ್ನು ನಿರ್ದೇಶಕರು (ಭೂಮಿ ಮತ್ತು ಯುಪಿಓಆರ್) ಮತ್ತು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕಾಲಕಾಲಕ್ಕೆ ಪುನರ್ವಿಮರ್ಶೆ ಮಾಡುವರು.<br>ಜಮೀನಿನ ವ್ಯಾಜ್ಯಗಳಿದ್ದರೆ ರೈತರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಪೌತಿ ಖಾತೆ ಅಂದೋಲನದ ರೀತಿಯಲ್ಲಿ ಬಗೆ ಹರಿಸುವ ಕುರಿತಂತೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.<br>ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 193 ಟಿಆರ್‌ಎಂ 2019, ದಿನಾಂಕ:18.02.2021 ರಲ್ಲಿ ನೀಡಿರು ಮಾರ್ಗಸೂಚಿಗಳನ್ವಯ ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ಆಸ್ತಿಯ ಹಕ್ಕಿನ ಕುರಿತಾದ ವಿವಾದಕ್ಕೆ ಸಂಬಂದಿಸಿದ್ದಲ್ಲಿ, ಈ ಬಗ್ಗೆ ತಹಶೀಲ್ದಾರವರು ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣಾ ಅವಧಿ ಮುಕ್ತಾಯಗೊಂಡ ಹದಿನೈದು ದಿನಗಳ ಒಳಗಾವಿ ಉಭಯ ಪಕ್ಷಕಾರರಿಗೆ ಸಕ್ಷಮ ಸಿವಿಲ್ ನ್ಯಾಯಾಲಯಕ್ಕೆ ಮೊರೆ ಹೋಗುವಂತೆ ಸೂಕ್ತ ಹಿಂಬರಹ ನೀಡಲು ನಿರ್ದೇಶನ ನೀಡಲಾಗಿದೆ. |
| (ಆ) | ರಾಜ್ಯದಲ್ಲಿರುವ ಜಮೀನುಗಳ ಮಾಲೀಕರ ಆಧಾರ ಜೋಡಣೆಯ | ಸರ್ಕಾರದ ಆದೇಶ ಸಂಖ್ಯೆ:ಕಂಇ 170 ಟಿಆರ್‌ಎಂ 2023, ದಿನಾಂಕ:21.11.2023ರನ್ವಯ ಪಹಣಿಗಳಿಗೆ ಆಧಾರ್ |

| | | |
|---|---|---|
| | ಕಾರ್ಯ ಯಾವ ಹಂತದಲ್ಲಿದೆ ಹಾಗೂ ಇಲ್ಲಿಯ ತನಕ ಆಧಾರ ಜೋಡಣೆಯಾಗಿರುವ ಜಮೀನಿನ ಮಾಲೀಕರ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸೀಡಿಂಗ್ ಮಾಡಲು ಸಮಿತಿ ರಚನೆ ಮಾಡಿ ಆದೇಶಿಸಲಾಗಿರುತ್ತದೆ.<br>ಸದರಿ ಆದೇಶದನ್ವಯ ದಿನಾಂಕ:13.12.2023ರಂದು ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಕಾರ್ಯವನ್ನು ಪ್ರಾಯೋಗಿಕವಾಗಿ ಬಳ್ಳಾರಿ ಹಾಗೂ ಖಾನಾಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br>ನಂತರದಲ್ಲಿ ದಿನಾಂಕ:12.02.2024ರನ್ವಯ ರಾಜ್ಯವ್ಯಾಪಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ರಾಜ್ಯಾದ್ಯಂತ ಒಟ್ಟು 4,12,50,961 ಮಾಲೀಕರ ಪೈಕಿ 2,18,92,509 ಮಾಲೀಕರಿಗೆ ಇ-ಕೆವೈಸಿ ಮಾಡಲಾಗಿದ್ದು, ಒಟ್ಟು 71,72,307 ಅನನ್ಯ ಮಾಲೀಕರಿಗೆ (Unique Farmers) ಆಧಾರ್ ಜೋಡಣೆ ಮಾಡಲಾಗಿರುತ್ತದೆ.<br>(ಜಿಲ್ಲಾವಾರು ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ) |
| (ಇ) | ನಕಲಿ ಖಾತಾ ತಡೆಯುವ ಸಲುವಾಗಿ ಇ-ಸ್ವತ್ತು ಕಡ್ಡಾಯವನ್ನು ಮಾಡಲು ಯಾವ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ; (ವಿವರಣೆ ನೀಡುವುದು) | ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ನೋಂದಣಿ, ಮಾರಾಟ ಮುಂತಾದ ವಹಿವಾಟುಗಳನ್ನು ತಡೆಗಟ್ಟುವ ಸಲುವಾಗಿ ಇ-ಸ್ವತ್ತು ತಂತ್ರಾಂಶ ರೂಪಿಸಿ ದಿನಾಂಕ:15.06.2013 ರಿಂದ ಜಾರಿಗೊಳಿಸಲಾಗಿದೆ. ಕಾವೇರಿ ಮತ್ತು ಇ-ಸ್ವತ್ತು ತಂತ್ರಾಂಶವನ್ನು ವಿದ್ಯುನ್ಮಾನವಾಗಿ ಸಂಯೋಜಿಸಲಾಗಿದೆ. |
| (ಈ) | ಸರ್ಕಾರಿ ಜಮೀನು ಸಾಗುವಳಿ ಚೀಟಿ ಮಂಜೂರಾಗಿದ್ದರೂ ಸಹ ದುರಸ್ತಿ ಪೋಡಿ ಆಗಿಲ್ಲದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರಣೆ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br>ಬಾಕಿಯಿರುವ ದರಖಾಸ್ತು ಪೋಡಿ ಪ್ರಕರಣಗಳ ತ್ವರಿತ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು:<br>1. ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024 ದಿನಾಂಕ 25-11-2024 ರಲ್ಲಿ ದರಖಾಸ್ತು ಪೋಡಿ ದುರಸ್ತಿ ಕುರಿತು ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ ಹಾಗೂ ಸರ್ಕಾರಿ ಸ.ನಂ.ನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ.<br>2. ಮಂಜೂರಿ ಜಮೀನುಗಳ ಪೋಡಿ ದುರಸ್ತಿ ಕಾರ್ಯವನ್ನು ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ನಮೂನೆ 1 ರಿಂದ 5 ಗಳ ಭರ್ತಿ ಮತ್ತು ಅನುಮೋದನೆ ಹಾಗೂ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್.ಲೈನ್.ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸ ಲಾಗಿದೆ.<br>3. ನಮೂನೆ 1 ರಿಂದ 5 ಗಳಿಗೆ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡುವುದನ್ನು ಕೈಬಿಡಲಾಗಿದೆ.<br>4. ನಮೂನೆ 1, 3 & 4 ರ ಒಟ್ಟು ವಿಸ್ತೀರ್ಣವು ಆಕಾರ ಬಂದ್ ವಿಸ್ತೀರ್ಣಕಿಂತ ಕಡಿಮೆ ಅಥವಾ |

| | | |
|---|---|---|
| | | ಸಮನಾಗಿರುವ ಪ್ರಕರಣಗಳಲ್ಲಿ ನಮೂನೆ 6 ರಿಂದ 10 ಗಳನ್ನು ಭರ್ತಿ ಮಾಡುವುದರಿಂದ ವಿನಾಯತಿ ನೀಡಿದೆ.<br>5. ಮೇಲ್ಕಂಡ ಸುತ್ತೋಲೆಯನ್ವಯ ಭೂಮಂಜೂರಿ ಕಡತದಲ್ಲಿ ಕನಿಷ್ಠ i) ಅಧಿಕೃತ ಜ್ಞಾಪನ/ದರಖಾಸ್ತು ವಹಿ/ಮಂಜೂರಿ ನಡವಳಿ ವಹಿ, ii) ಸಾಗುವಳಿ ಚೀಟಿ/ಸಾಗುವಳಿ ಚೀಟಿ ವಿತರಣಾ ವಹಿ, iii)ಚಾಲ್ತಿ ಪಹಣಿ, ದಾಖಲೆಗಳಿದ್ದಲ್ಲಿ ತಹಶಿಲ್ದಾರರು ಮಂಜೂರಿ ಕಾಲದ ಮ್ಯುಟೇಷನ್ ಹಾಗೂ ತತ್ಸಂಬಂದಿತ ದಾಖಲೆಗಳನ್ವಯ ಮಂಜೂರಿ ನೈಜತೆಯನ್ನು ಪರಿಶೀಲಿಸಿಕೊಂಡು ಪ್ರಕರಣಗಳನ್ನು ಅಳತೆಗೆ ಒದಗಿಸಲು ಮತ್ತು ತಹಶೀಲ್ದಾರರು ಮಂಜೂರಿ ನೈಜತೆಯಿಂದ ಕೂಡಿದೆ ಎಂದು ಆದೇಶಿಸಿದ ನಂತರ ಸರ್ವೆ ಆದಿಕಾರಿಗಳು ಅಥವಾ ಇತರರು ನೈಜತೆಯನ್ನು ಪ್ರಶ್ನಿಸುವಂತಿಲ್ಲ ಎಂದು ಸೂಚಿಸಿದೆ.<br>6. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಬಗ್ಗೆ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>7. ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿಗೆ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸರ್ಕಾರದಿಂದ ಸೂಚಿಸಿದ್ದು, ಅದರಂತೆ ಕಂದಾಯ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ.<br>8. ಪಹಣಿಯಲ್ಲಿನ ಮಾಲೀಕರ ಹೆಸರು/ಪೌತಿ ಖಾತೆ, ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂಧ ಕಂದಾಯ ಇಲಾಖೆ ಯಿಂದ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>9. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯಸೂಚನೆ ನೀಡಲಾಗುತ್ತಿದೆ.<br>10. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಇದರಿಂದ ಬಾಕಿಯಿರುವ ಮಂಜೂರಾದ ಜಮೀನಿನ ಪೋಡಿ ದುರಸ್ತಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. |
| (ಉ) | ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ತುರ್ತಾಗಿ ಅತ್ಯವಶ್ಯಕ ಇರುವ ಸರ್ವೇಯರ್‌ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳನ್ನು | ರಾಜ್ಯದಲ್ಲಿ ಖಾಲಿ ಇರುವ ಭೂಮಾಪಕರ (ಸರ್ವೇಯರ್) ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಕಂಇ 238 ಎಫ್.ಎಲ್.ಆರ್.2021, ದಿನಾಂಕ:13.07.2022 ಮತ್ತು ದಿನಾಂಕ:24.01.2023ರಂತೆ 750 |

| | | |
|---|---|---|
| | ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗಿದೆ? | ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ಕರ್ನಾಟಕ ಲೋಕಸೇವಾ ಆಯೋಗ ಅಧಿಸೂಚನೆ ನಂ.ಇ(2)581 & 582/2023-24 ದಿನಾಂಕ:29. 02.2024 ಮತ್ತು ತಿದ್ದುಪಡಿ ಅಧಿಸೂಚನೆ ಸಂಖ್ಯೆ:ಇ(2)1025 & 1026/ 2024-25/ಪಿಎಸ್.ಎ ದಿನಾಂಕ:22.11.2024 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಇ(2)1023 & 1024/2024-25/ಪಿಎಸ್.ಎ ದಿನಾಂಕ:22-11-2024ಗಳನ್ನು ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿರುತ್ತದೆ. ಸದರಿ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಲು ದಿನಾಂಕ:09-12-2024 ಕೊನೆಯ ದಿನಾಂಕವಾಗಿರುತ್ತದೆ.<br>ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಪೈಕಿ 1000 ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ. |

**ಸಂ:ಕಂಇ 234 ಟಿಆರ್ಎಂ 2024** (1599923)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ. ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು), ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 269ರ ಉಪ ಪ್ರಶ್ನೆ (ಆ)ಗೆ ಅನುಬಂಧ

***ಅನುಬಂಧ- ಆಧಾರ್ ಸೀಡಿಂಗ್ ವರದಿ (ದಿನಾಂಕ: 03.12.2024 ರಂತೆ )***

| ಕ್ರಸಂ | ಜಿಲ್ಲೆ | ಆಧಾರ್ ಸೀಡಿಂಗ್ ಮಾಡಬೇಕಾದ ಒಟ್ಟು ಪಹಣಿದಾರರು | ಪಹಣಿ ಮತ್ತು ಆಧಾರ್ ಗೆ ಜೋಡಣೆ ಮಾಡಲಾದ ಪಹಣಿದಾರರ ವಿವರ | ವಿ.ಎ.ಒ ವರದಿಯನ್ವಯ ಸರ್ಕಾರಿ ಜಮೀನು ಎಂದು ಗುರುತಿಸಲಾಗಿರುವ ಪಹಣಿದಾರರು | ವಿ.ಎ.ಒ ವರದಿಯನ್ವಯ ಭೂಸ್ವಾಧೀನಗೊಂಡ ಎಂದು ಗುರುತಿಸಲಾಗಿರುವ ಪಹಣಿದಾರರು | ವಿ.ಎ.ಒ ವರದಿಯನ್ವಯ ಭೂಪರಿವರ್ತನೆ ಆಗಿರುವ ಪಹಣಿದಾರರ ವಿವರ | ವಿ.ಎ.ಒ ವರದಿಯನ್ವಯ ಮರಣಹೊಂದಿರುವ ಪಹಣಿದಾರರ ವಿವರ | ಭಾಗಶಃ ಜೋಡಣೆ ಮಾಡಲಾದ ಪಹಣಿದಾರರು (ಛಾಯಾಚಿತ್ರ ಹೊರತುಪಡಿಸಿ) | ಶೇಕಡಾವಾರು ((4+5+6+7+8+9)/3*100) | ಒಟ್ಟು ಮಾಲೀಕರು (Unique farmers) |
|---|---|---|---|---|---|---|---|---|---|---|
| *1* | *2* | *3* | *4* | *5* | *6* | *7* | *8* | *9* | *10* | *11* |
| 1 | ದಾವಣಗೆರೆ | 875442 | 610313 | 1738 | 3726 | 102091 | 93758 | 3162 | 93.07 | 221494 |
| 2 | ಬಳ್ಳಾರಿ | 532307 | 350835 | 1624 | 2165 | 57453 | 68535 | 5270 | 91.28 | 131828 |
| 3 | ಕೋಲಾರ | 1034061 | 570107 | 5075 | 5121 | 76079 | 281759 | 5083 | 91.22 | 160339 |
| 4 | ಹಾಸನ | 1931966 | 1102502 | 2706 | 8434 | 347992 | 263775 | 34572 | 91.10 | 288276 |
| 5 | ಯಾದಗಿರಿ | 610140 | 393981 | 2118 | 9748 | 43654 | 102809 | 2864 | 90.99 | 168143 |
| 6 | ಬೀದರ್ | 594511 | 382541 | 1610 | 5152 | 64479 | 72337 | 5594 | 89.44 | 219109 |
| 7 | ಚಿಕ್ಕಬಳ್ಳಾಪುರ | 856918 | 427515 | 4659 | 4172 | 95292 | 221948 | 7792 | 88.85 | 131296 |
| 8 | ಬಾಗಲಕೋಟೆ | 1288913 | 850096 | 2946 | 20361 | 125239 | 66305 | 75087 | 88.45 | 289658 |
| 9 | ಗದಗ್ | 749459 | 493755 | 1671 | 3067 | 79900 | 62328 | 15105 | 87.51 | 212167 |
| 10 | ಚಿತ್ರದುರ್ಗ | 1044949 | 645493 | 1590 | 5202 | 64270 | 184801 | 6479 | 86.88 | 253190 |
| 11 | ತುಮಕೂರು | 2697386 | 1479821 | 5641 | 6086 | 205073 | 558583 | 79504 | 86.55 | 406750 |
| 12 | ಕಲಬುರಗಿ | 893258 | 587869 | 3253 | 9404 | 71442 | 93630 | 7255 | 86.52 | 336515 |
| 13 | ಕೊಡಗು | 887066 | 361693 | 1343 | 1420 | 109618 | 281137 | 11669 | 86.45 | 68748 |
| 14 | ದಕ್ಷಿಣ ಕನ್ನಡ | 2901413 | 826306 | 2635 | 6905 | 1481707 | 117898 | 49186 | 85.64 | 200767 |
| 15 | ರಾಮನಗರ | 981431 | 471653 | 2244 | 5264 | 163904 | 178472 | 11223 | 84.85 | 135576 |
| 16 | ಧಾರವಾಡ | 1105210 | 504217 | 2159 | 7352 | 338988 | 57758 | 26369 | 84.77 | 215438 |
| 17 | ವಿಜಯನಗರ | 663163 | 380141 | 2209 | 2647 | 45790 | 122307 | 8742 | 84.72 | 148224 |
| 18 | ಕೊಪ್ಪಳ | 612567 | 397103 | 1330 | 5498 | 37074 | 63139 | 14105 | 84.60 | 198459 |
| 19 | ಚಿಕ್ಕಮಗಳೂರು | 866508 | 543505 | 1380 | 1199 | 77897 | 94014 | 14219 | 84.50 | 158204 |
| 20 | ಮೈಸೂರು | 1725682 | 888538 | 3294 | 12237 | 252763 | 245206 | 42474 | 83.71 | 279920 |
| 21 | ವಿಜಯಪುರ | 1512147 | 806782 | 4621 | 17554 | 355927 | 56406 | 24435 | 83.70 | 377464 |
| 22 | ಉತ್ತರ ಕನ್ನಡ | 2149378 | 1248771 | 4732 | 3865 | 298339 | 186182 | 46997 | 83.23 | 250891 |
| 23 | ಚಾಮರಾಜನಗರ | 663696 | 314200 | 1814 | 4047 | 74778 | 117176 | 35861 | 82.55 | 128395 |
| 24 | ರಾಯಚೂರು | 844940 | 541572 | 3295 | 12920 | 48606 | 81872 | 4600 | 82.00 | 277760 |
| 25 | ಹಾವೇರಿ | 1298642 | 706118 | 1945 | 7946 | 230453 | 93685 | 22558 | 81.83 | 293860 |
| 26 | ಬೆಂಗಳೂರು ಗ್ರಾಮಾಂತರ | 735086 | 297760 | 1400 | 10391 | 205135 | 83384 | 1526 | 81.57 | 93270 |
| 27 | ಶಿವಮೊಗ್ಗ | 825929 | 486997 | 2440 | 2108 | 72936 | 82796 | 26306 | 81.55 | 194060 |
| 28 | ಬೆಳಗಾವಿ | 4665458 | 2689290 | 14734 | 26758 | 540372 | 431381 | 97316 | 81.45 | 766624 |
| 29 | ಮಂಡ್ಯ | 2233230 | 1315628 | 4947 | 10058 | 147548 | 323986 | 12996 | 81.28 | 307200 |
| 30 | ಉಡುಪಿ | 2818091 | 1135458 | 585 | 2614 | 691749 | 280717 | 159228 | 80.56 | 229414 |
| 31 | ಬೆಂಗಳೂರು ನಗರ | 652014 | 81949 | 2923 | 37000 | 357095 | 29520 | 1552 | 78.23 | 29268 |
| **ಒಟ್ಟು** | | **41250961** | **21892509** | **94661** | **260421** | **6863643** | **4997604** | **859129** | **84.77** | **7172307** |